# <u>4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು</u>

**ಎಸ್‌ಸಿ. 119/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸೋಮಶೇಖರ್ | | <u>ಪ್ರಮಾಣ ಮಾಡಿಸಿದ ದಿನಾಂಕಃ</u> |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇ.ಶಿವಣ್ಣೇಗೌಡ | | **21.01.2025** |
| **ವಯಸ್ಸು** | ಃ 47 **ವರ್ಷ** | | |
| **ವೃತ್ತಿ** | ಃ ಹೆಚ್.ಸಿ, ಬನ್ನೂರು ಪೋಲೀಸ್ ಠಾಣೆ | **ಪ್ರಾ.ಸಾ.** ಃ 46 | |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** ಃ 64 | |

**<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>**

. ನಾನು ಜುಲೈ *2019* ರಿಂದ ಸೆಪ್ಟೆಂಬರ್ *2024* ರವರೆಗೆ ಮೈಸೂರು ದಕ್ಷಿಣ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕೆಲಸ ಮಾಡಿದ್ದೇನೆ. ಆ ಕಾಲಕ್ಕೆ ಮೊ.ಸಂಖ್ಯೆ *310/2021* ಪ್ರಕರಣದಲ್ಲಿ ದಿಃ*21.10.2021* ರಂದು ತನಿಖಾಧಿಕಾರಿಯಾದ ಶಶಿಕುಮಾರ್ ಇವರು ಆದೇಶ ಮಾಡಿದಂತೆ ಕೃತ್ಯ ನಡೆದ ಸ್ಥಳದಲ್ಲಿ ಪೊಟೋಗಳನ್ನು ತೆಗೆದಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-*3* ರಿಂದ *5* ಆ ಸ್ಥಳದಲ್ಲಿ ತೆಗೆದ ಪೊಟೋಗಳು ಇವೆ. ನಂತರ ದಿಃ*22.10.2021* ರಂದು ಶವ ತನಿಖಾ ಮಹಜರ್ ಕಾಲಕ್ಕೆ ಮೃತ ಶಿವಪ್ರಕಾಶ್ ಮತ್ತು ಲತಾ ಇವರ ಶವಗಳ ಪೊಟೋಗಳನ್ನು ತೆಗೆದಿದ್ದೆ. ಈಗ ನಾನು ನೋಡುತ್ತಿರುವ ಪೊಟೊಗಳು ಮೃತ ಶಿವಪ್ರಕಾಶ್ ಇವರ ಶವದ ಪೊಟೋಗಳು ಇವೆ. ಸದರಿ ಪೊಟೋಗಳನ್ನು ಅನುಕ್ರಮವಾಗಿ ನಿ.ಪಿ-*78* ರಿಂದ *83* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಪೊಟೊಗಳು ನಿ.ಪಿ-*15* ರಿಂದ *8* ಮತ್ತು *24* ಎಂದು ಗುರುತಿಸಿರುವ ಪೊಟೋಗಳು ಮೃತ ಲತಾ ಇವರ ಶವದ ಪೊಟೋಗಳು ಇವೆ. ದಿಃ*24.10.2021* ರಂದು ಆರೋಪಿತನಿಂದ ಕೃತ್ಯಕ್ಕೆ ಉಪಯೋಗಿಸಿದ್ದ

ಸ್ಕೂಟರ್, ಕೃತ್ಯದ ಕಾಲಕ್ಕೆ ಆರೋಪಿ ಧರಿಸಿದ್ದ ಬಟ್ಟೆಗಳು, ಕೃತ್ಯಕ್ಕೆ ಉಪಯೋಗಿಸಿದ್ದ ಮಚ್ಚನ್ನು ಅಮಾನತ್ತು ಪಡಿಸಿಕೊಂಡಾಗ ಪೊಟೋಗಳನ್ನು ತೆಗೆದಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-*26, 27, 42* ರಿಂದ *46* ಪೊಟೋಗಳು ಅವೇ ಇರುತ್ತವೆ. ಈಗ ನಾನು ನೋಡುತ್ತಿರುವ ಇನ್ನೆರಡು ಪೊಟೋಗಳು ಮಚ್ಚನ್ನು ಅಮಾನತ್ತು ಪಡಿಸಿಕೊಳ್ಳುವ ಕಾಲಕ್ಕೆ ತೆಗೆದ ಪೊಟೋಗಳು ಇವೆ. ಸದರಿ ಪೊಟೋಗಳನ್ನು ನಿಪಿ-*84* ಮತ್ತು *85* ಎಂದು ಗುರುತಿಸಿದೆ. ಆ ಎಲ್ಲಾ ಪೊಟೋಗಳನ್ನು ನಾನು ಪೋಲೀಸ್ ಠಾಣೆಯ ಕಂಪ್ಯೂಟರ್ ಮತ್ತು ಪ್ರಿಂಟರ್ ನಿಂದ ಪ್ರಿಂಟ್ ತೆಗೆದಿದ್ದೆ. ಆ ಪೊಟೋಗಳನ್ನು ತೆಗೆದು ಪ್ರಿಂಟ್ ಮಾಡಿದ ಬಗ್ಗೆ ನಾನು ಕಲಂ *65* ಬಿ ನಂತೆ ಪ್ರಮಾಣಪತ್ರ ಕೊಟ್ಟಿದ್ದೇನೆ. ಸದರಿ ಪ್ರಮಾಣಪತ್ರವನ್ನು ನಿ.ಪಿ-*86* ಮತ್ತು ಸಹಿಯನ್ನು ನಿ.ಪಿ-*86(ಎ)* ಎಂದು ಗುರುತಿಸಿದೆ. ತನಿಖೆ ಕಾಲಕ್ಕೆ ಎಲ್ಲಾ ಪೊಟೋಗಳನ್ನು ತೆಗೆದ ಕಾರಣ ಮತ್ತು ಎಲ್ಲಾ ಪೊಟೋಗಳು ತನಿಖೆಗೆ ಒಳಪಡುವ ಕಾರಣ ನಿ.ಪಿ-*86* ರಲ್ಲಿ ಘಟನೆ ಸ್ಥಳದಲ್ಲಿ ತೆಗೆದ ಪೊಟೋಗಳು ಮತ್ತು ವಿಡಿಯೋ ಎಂದು ನಮೂದಾಗಿದೆ. ಅಮಾನತ್ತು ಮಹಜರ್ ಕಾಲಕ್ಕೆ ಕೋರ್ಟ್ ಮುಂದೆ ಇರುವ ಆರೋಪಿತನನ್ನು ನೋಡಿದ್ದೆ. ನಿ.ಪಿ-*33* ಪೊಟೋವನ್ನು ಸಹ ನಾನು ತೆಗೆದಿದ್ದು ಅದನ್ನು ಗಾಯಾಳು ಶರ್ಟ್ ಅನ್ನು ಠಾಣೆಗೆ ತಂದು ಹಾಜರುಪಡಿಸಿದಾಗ ತೆಗೆದಿದ್ದೇನೆ. ಆ ಎಲ್ಲಾ ಪೊಟೋಗಳನ್ನು ನಾನು ಸಿಡಿ ಗೆ ಹಾಕಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-*6* ಆ ಸಿಡಿ ಇದೆ.

ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು